1984ರ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(7)ರ ಪ್ರಕಾರ

1. ಶ್ರೀ ಬಿ.ಎನ್. ಚಂದ್ರಶೇಖರಯ್ಯ, ನಿವೃತ್ತ ಪ್ರಧಾನ ಇಂಜಿನಿಯರ್ ಹಾಗೂ ಶ್ರೀ ವಿ.ಪುಷ್ಪರಾಜು, ನಿವೃತ್ತ ತಾಂತ್ರಿಕ ಸಹಾಯಕರು, ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು ಇವರುಗಳ ಸಂಬಂಧವಾಗಿ ಮಾನ್ಯ ಲೋಕಾಯುಕ್ತರವರು ಮಾಡಿರುವ ವಿಶೇಷ ವರದಿ.

ಕಂಪನಿ ಅಧಿನಿಯಮ 1956 ಪರಿಚ್ಛೇದ 227(4)ನೇ ಪ್ರಕರಣದ ಮೇರೆಗೆ:

1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ

ಕಂಪನಿ ಕಾಯ್ದೆ 1956 ಕಲಂ 619(ಎ)(3)ರ ಮೇರೆಗೆ

1. ಕೊಂಕಣ ರೈಲ್ವೆ ಕಾರ್ಪೊರೇಷನ್‌ನ 2010–11ನೇ ಸಾಲಿನ ವಾರ್ಷಿಕ ವರದಿ.

ಕರ್ನಾಟಕ ವಿಶ್ವ ವಿದ್ಯಾಲಯಗಳ ಅಧಿನಿಯಮ 2000ದ ಕಲಂ 50(2)ರ ಮೇರೆಗೆ :

1. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರ 2008–09ನೇ ಸಾಲಿನ ಲೆಕ್ಕಪರಿಶೋಧನೆಯ ಅನುಸರಣಾ ವರದಿ ಮತ್ತು 2009–10ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ವರದಿಯನ್ನು ಮಂಡಿಸುತ್ತೇನೆ.

II. ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೇ,

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 48(5)ರ ಪ್ರಕರಣವಾದ ಮೇರೆಗೆ:

1. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.